11	ಮೆಕ್ಕೆಜೋಳ	ಸಾರ್ವಜನಿಕ ತಳಿ	14.50
		ಸಂಕರ ತಳಿಗಳಿಗೆ	25.00
12	ಸಜ್ಜೆ	ಸಾರ್ವಜನಿಕ ತಳಿ	9.25
		ಸಂಕರ ತಳಿಗಳಿಗೆ	43.00
13	ಜೋಳ	ಸಂಕರ ತಳಿಗಳಿಗೆ	22.50

ರಾಜ್ಯ ಹೆದ್ದಾರಿಗಳ ದುರಸ್ತಿ

216(559) ಶ್ರೀ ಸಿದ್ದು ಸವದಿ:(ತೇರದಾಳ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ–ನಿಪ್ಪಾಣಿ ಮತ್ತು ಜಮಖಿಂಡಿ ಕಾಗವಾಡ ರಾಜ್ಯ ಹೆದ್ದಾರಿಗಳೆರಡೂ ಸಂಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮವೇನು;

ಆ) ಈ ಎರಡೂ ರಸ್ತೆಗಳು ಕೇಶಿಫ್‌ನಲ್ಲಿ ಮಂಜೂರಾಗಿರುವುದು ನಿಜವೇ; ಹಾಗಿದ್ದಲ್ಲಿ, ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಈ ಸಂಬಂಧದಲ್ಲಿ ಟೆಂಡರ್ ಕರೆಯಲಾಗಿದೆಯೇ;

ಈ) ಹಾಗಿದ್ದಲ್ಲಿ, ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಹಾಗೂ ಅಲ್ಲಿಯವರೆಗೆ ಈ ರಸ್ತೆಗಳ ದುರಸ್ತಿಗೆ ಕೈಗೊಳ್ಳುವ ಕ್ರಮವೇನು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಜಮಖಿಂಡಿಯಿಂದ ತೇರದಾಳ–ಕುಡುಚಿ ಮನಗಸುಳಿ–ಮಹಾರಾಷ್ಟ್ರಗಡಿವರೆಗಿನ 79 ಕಿಮೀ. ರಸ್ತೆ ಹಾಗೂ ಮುಧೋಳದಿಂದ ಮಾಲಿಂಗಪುರ ಕಬ್ಬೂರು ಮಾರ್ಗವಾಗಿ ನಿಪ್ಪಾಣಿವರೆಗಿನ 108 ಕಿ.ಮೀ. ರಸ್ತೆ ಅಭಿವೃದ್ಧಿಯನ್ನು ಕೆಶಿಫ್–II ಯೋಜನೆಯಡಿಯಲ್ಲಿ ಸೇರಿಸಲಾಗಿದೆ.

ಆ) ಮುಧೋಳದಿಂದ–ಮಹಾಲಿಂಗಪುರ–ಕಬ್ಬೂರು–ಚಿಕ್ಕೋಡಿ–ನಿಪ್ಪಾಣಿ (NH-4) ವರೆಗಿನ ರಸ್ತೆಯನ್ನು Annuity ಗುತ್ತಿಗೆ ಆಧಾರದಲ್ಲಿ

ವಿಶ್ವಬ್ಯಾಂಕ್ ನೆರವಿನಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಗುತ್ತಿಗೆ ದಸ್ತಾವೇಜುಗಳ ಸಿದ್ದತೆ ಪಡೆಯುತ್ತಿದೆ.

ಇ) ವಿಶ್ವಬ್ಯಾಂಕ್ ಅನುಮೋದನೆಯ ನಂತರ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದು

ಈ) ಜಮಖಂಡಿ–ಕಾಗವಾಡ ರಸ್ತೆಗೆ ಸಂಬಂಧಿಸಿದಂತೆ ಈವರೆಗೆ ಯಾವುದೇ ಹಣಕಾಸು ಸಂಸ್ಥೆಯಿಂದ ನೆರವು ಒದಗಿಸಿಲ್ಲ. ಈ ಬಗ್ಗೆ ಸರ್ಕಾರವು ಮುಂದಿನ ಆರ್ಥಿಕ ಸಾಲಿನಲ್ಲಿ ಸಂಬಂಧಪಟ್ಟ ಹಣಕಾಸು ಸಂಸ್ಥೆಗಳಿಂದ ನೆರವು ಪಡೆಯಲು ಅಗತ್ಯ ಕ್ರಮಕೈಗೊಳ್ಳಲಾಗುವುದು. ಅಲ್ಲಿಯವರೆಗೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ) ವಲಯದಿಂದ ರಸ್ತೆ ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ನೇಕಾರರಿಗೆ ಶೇಕಡಾ 3 ರಷ್ಟು ರಿಯಾಯಿತಿ ಬಡ್ಡಿ ಸಾಲ

217(560) ಶ್ರೀ ಸಿದ್ದು ಸವದಿ:(ತೇರದಾಳ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ವಿವಿಧ ವೃತ್ತಿಗಳಿಗೆ ಶೇಕಡ 3 ರಷ್ಟು ರಿಯಾಯಿತಿ ಬಡ್ಡಿ ಸಾಲ ವಿತರಿಸುವ ಯೋಜನೆಗಳಾವುವು? ಹಾಗಿದ್ದಲ್ಲಿ, ಇಲ್ಲಿಯವರೆಗೆ ರೈತರು, ನೇಕಾರರು ಮತ್ತು ಮೀನುಗಾರರಿಗೆ ನೀಡಿರುವ ಸಾಲಗಳೆಷ್ಟು?

ಆ. ನೇಕಾರರಿಗೆ ಈ ಸಾಲವನ್ನು ಕೊಡಲು ಬ್ಯಾಂಕುಗಳು ಮತ್ತು ಸಹಕಾರ ಸಂಘಗಳು ಮುಂದೆ ಬಂದಿಲ್ಲದಿರುವುದರಿಂದ ನೇಕಾರರು ಈ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ನೇಕಾರರಿಗೂ ರೈತರಂತೆ ಶೇಕಡ 3ರಷ್ಟು ರಿಯಾಯಿತಿ ಬಡ್ಡಿಯಿಂದ ಸಾಲ ದೊರಕಿಸಿಕೊಡಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):

ಅ) ರಾಜ್ಯದಲ್ಲಿ ರೈತರು, ನೇಕಾರಿಕೆ ಮತ್ತು ಮೀನುಗಾರಿಕೆ ವೃತ್ತಿಗಳಿಗೆ ದಿ.01–04–2008 ರಿಂದ ಶೇ. 3ರಷ್ಟು ರಿಯಾಯಿತಿ ಬಡ್ಡಿದರದಲ್ಲಿ ಸಾಲ ವಿತರಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ವಿತರಿಸಿರುವ ಸಾಲಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

(ರೂ.ಕೋಟಿಗಳಲ್ಲಿ)